Regd No. M 1299 SATYAVADI Founded 1927

ಸತ್ಯವಾದಿ

ಸಂಪುಟ 26 ಸಂಚಿಕೆ 99] ಶುಕ್ರವಾರ 12—2—1943 [ಬಿಡಿಪ್ರತಿ 3 ಪೈ

ಗಾಂಧೀಜಿಯವರು ಬಿಡುಗಡೆ ಮಾಡಲಡಬೇಕು

ಮಹಾತ್ಮಾ ಗಾಂಧಿಯವರು ಬಿಡುಗಡೆ ಮಾಡಲ್ಪಡಬೇಕೆಂದು ಶ್ರೀ ರಾಜಗೋಪಾಲಾಚಾರಿಯವರು ಅಭಿಪ್ರಾಯ ಪಟ್ಟಿರುವರು,

ಬೊಂಬಾಯಿ ಇಂಡಿಯನ್ ಮರ್ಚೆಂಟ್ ಚೇಂಬರಿನವರು ವೈಸರಾಯರಿಗೆ ಟೆಲಿಗ್ರಾಂ ಕಳುಹಿಸಿ ಗಾಂಧೀಜಿಯವರನ್ನು ಬಿಡುಗಡೆ ಮಾಡಿ ಬಿಕ್ಕಟ್ಟನ್ನು ಪರಿಹರಿಸಬೇಕೆಂದು ಗೋರಿದ್ದಾರೆ,

ಗಾಂಧಿಯವರ ಉಪವಾಸದ ಬಗ್ಗೆ ಅಹಮದಾಬಾದಿನಲ್ಲಿ ಮಾರ್ಕೆಟ್ಟು ಅಂಗಡಿಗಳು ಮುಚ್ಚಲ್ಪಟ್ಟಿದ್ದವು, ತೆರೆದಿದ್ದ ಅಂಗಡಿಗಳಿಗೆ ಕಲ್ಲು ಹೊಡೆಯಲಾಯಿತು.

ಸೂರತ್ತಿನಲ್ಲಿ ವಿದ್ಯಾರ್ಥಿಗಳು ಸ್ಕೂಲಿಗೆ ಹೋಗಲಿಲ್ಲ.

ಲಂಡನ್ ಪತ್ರಿಕೆಗಳೂ ಉಪವಾಸದ ಒಗ್ಗೆ ಸಮಾಲೋಚಿಸುತ್ತ ಸೆರೆಯಿಂದ ಬಿಡುಗಡೆ ಹೊಂದಲು ಸರ್ಕಾರವನ್ನು ಒತ್ತಾಯ ಪಡಿಸಲು ಶ್ರೀ ಗಾಂಧಿಯವರು ಹೀಗೆ ಮಾಡಿರುಪಂತೆ ಅಭಿಪ್ರಾಯಪಟ್ಟಿವೆ.

— ನಗರ ವಾರ್ತೆ —

ಮೈಸೂರು, ಫೆ. 12

ನಿನ್ನೆ ಟರ್ಕಿಯ ಪತ್ರಿಕಾ ನಿಯೋಗ ಗೋಷ್ಠಿಯವರು ರಾಜಧಾನಿಯ ಎಲ್ಲಾ ಸಂಸ್ಥೆಗಳಿಗೂ ನೋಡಬೇಕಾದ ಸ್ಥಳಗಳಿಗೂ ಅರಮನೆ ಬೆಟ್ಟ ಮುಂತಾದ ಕಡೆಗಳಿಗೂ ಹೋಗಿ ಬಂದರು. ಇವರ ಗೌರವಾರ್ಥವಾಗಿ ಸಾಯಂಕಾಲ ಅರಮನೆಯಲ್ಲಿ ದೀಪೋತ್ಸವವು ಏರ್ಪಟ್ಟಿತ್ತು. ಇವರುಗಳು ರಾತ್ರೆ 8½ ಗಂಟೆಗೆ ಉತ್ತರ ದಿಕ್ಕಿನ ಕೋಟೆ ಬಾಗಿಲಲ್ಲಿ ಮೋಟಾರು ಕಾರಿನಲ್ಲಿ ಕೂತು ಬಂದು ಅಲ್ಲಿ ಇಳಿದು ಅಕ್ಕ ಪಕ್ಕದ ದೇವಸ್ಥಾನ ಕೋಟೆ ಇವ್ಯೇ ದೃಶ್ಯವನ್ನು ನೋಡಿದರು. ಜನಸಂದಣಿ ಇವರನ್ನು ಸುತ್ತುಗಟ್ಟಿತು. ನು| ಮಹವ ಬಾ ಇಮಾಂಮ್‌ರವರು ಇವರನ್ನು ಗೌರ್ನಮೆಂಟ್ ಹೌಸಿನಲ್ಲಿ ನೋಡಿ ಬಂದರು ಆತಿಥ್ಯ ನಡೆಯಿತು.

ಇವತ್ತು ಬೆಳಿಗ್ಗೆ 8—30 ಗಂಟೆಗೆ ಹಜರತ್ ಇಮಾಂ ವಿದ್ಯಾ ಖಾತೆಯ ಉಪ ಮಂತ್ರಿಯವರು ಗೌ ಹೌಸಿಗೆ ಬೋಗಿ ಟರ್ಕಿ ಪತ್ರಿಕಾ ನಿಯೋಗ ಗೋಷ್ಠಿಯವರ ಯೋಗಕ್ಷೇಮವನ್ನು ನೋಡಿದರು. ಈ ಗೋಷ್ಠಿಯವರು 9 ಗಂಟೆಗೆ ಕಾರಿನಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಿದರು ವಿದ್ಯಾ ಸಚಿವರು ಹೋಗುತ್ತಾರೆ.

LATEST NEWS

ಸ್ವಾಯತ್ತ ಸರ್ಕಾರವು 7476 ಮಂದಿ ರಾಜಕೀಯ ಖೈದಿಗಳಿಗೆ ಸುರತ್ತನ್ನೊಳಗೊಂಡ ಸ್ವಾತಂತ್ರ್ಯ ಕೊಟ್ಟಿದ್ದಾರೆ

ಟ್ಯೂನಿಸ್ ಒಟ್ಟಾಗಿ 25 ಮೈಲಿಯಷ್ಟಲ್ಲಿ ಬ್ರಿಟಿಷ್ 8 ನೇ ಸೈನ್ಯವು ಶತ್ರು ಸೈನ್ಯವನ್ನು ಎದುರಿಸಿತೆಂದು ಕೈರೋ ವಾರ್ತೆ.

ಡೆಲ್ಲಿ ಶಾಸನ ಸೆಂಟ್ರಲ್ ಅಸೆಂಬ್ಲಿಯಲ್ಲಿ ಚಿಲ್ಲರೆ ಶೇಖರಣೆ ಒಗ್ಗೆ ಚರ್ಚೆ ನಡೆದು ಅರ್ಥಿಕ ಸಚಿವರು ಚಿಲ್ಲರೆ ಶೇಖರಿಸುತ್ತಿರುವವರನ್ನು ಖಂಡಿಸಿರುವರು

ಚೀನಾದಲ್ಲಿ ಈಗ ಎಲ್ಲೆಲ್ಲೂ ಭತ್ತವನ್ನು ಪರ್ವತಕ್ಕೆ ಎರಡು ಬೆಳೆ ತೆಗೆಯುತ್ತಾರೆ

ತಾ|| 10—2—43 ರಲ್ಲಿ ನಡೆದ ಫುಟ್‌ಬಾಲ್ ಮ್ಯಾಚು ಸೆಮಿ ಫೈನಲ್ ನಲ್ಲಿ ರೋವರ್ಸ್. ಮಹಾರಾಜರ ಅರಮನೆ ಸಿಪಾಯಿಗಳ ಟೀಮಿಗೆ 1 ಗೋಲಿನಿಂದ ಸೋಲಿಸಿದರು. ಸಿಪಾಯಿ ಟೀಮು ಆಟ ಬಹಳ ಚೆನ್ನಾಗಿತ್ತು. 5.6 ಗೋಲು ಹೊಡಿಯಬೇಕಾಗಿತ್ತು. ಅದೃಷ್ಟ ಚೆನ್ನಾಗಿತ್ತಿಲ್ಲ. ಶ್ರೀ ಯ.ಎಲ್. ರಾಮಚಂದ್ರ ರಾಯರು ರೋವರ್ಸ್ ಗೋಲ್ ಕೀಪರ್ ಗೆ ಬೆಳ್ಳಿ ಒಟ್ಟಲನ್ನು ಆತನು ಬಹಳ ಸಂದಿಗ್ಧ ಸಮಯದಲ್ಲೆಲ್ಲಾ ಆಗಬೇಕಾದ ಗೋಲುಗಳನ್ನು ತಡೆದು ಆಡಿದ್ದಕ್ಕೆ ಅಲ್ಲೆ ಬಹುಮಾನಿಸಿದರು.

ತಾಜಾ ಸಮಾಚಾರ

ಹೈದರಾಬಾದಿನ ಸರ್ಕಾರದವರು ಇಗಲೇ ಮುವ್ವತ್ತು ಕೋಟಿ ರೂಪಾಯಿಗಳ ನೋಟನ್ನು ಛಾಪಾ ಹಾಕಿದರು.

ನಿನ್ನೆ ದಿವಸ ಮಾಲ್ಟಾಗೆ ಕಳುಹಿಸಿದ ನೌಕಾಗಳೆಲ್ಲವೂ ಸುರಕ್ಷಿತವಾಗಿ ಸೇರಿದವು. ಜನರು ಕೋಲಾಹಲ ಮಾಡಿದರು. ಈಗ ಶತ್ರುಗಳ ಭಯ ಕಮ್ಮಿಯಾಗಿರುವುದೇ ಕಾರಣವು.

ಬಂದು ಪಕ್ಷದಿಂದ ಸಾಲೋಮನ್ ದ್ವೀಪಗಳಲ್ಲಿ ಜಪಾನೀಯರು 3000 ಹತರಾಗಿರುತ್ತಾರೆ. ಇದವರೆಗೆ ಜಪಾನಿಯರಿಗೂ ಅಮೇರಿಕಾದವರಿಗೂ ನಷ್ಟವಾದುದನ್ನು ನೋಡಿದರೆ 1 ಕ್ಕೆ 12 ರಂತೆ ಜಪಾನೀಯರು ಹತರಾಗಿರುವರು.

ಇನ್ನು ಕೆಲವು ದಿವಸಗಳವರೆಗೆ ಆರ್. ಎ. ಪಿ. ವಿಮಾನಗಳು ಮದ್ರಾಸಿನಲ್ಲೂ ಬೆಂಗಳೂರಿನಲ್ಲೂ ಅಭ್ಯಾಸಮಾಡುವುವು. ಬಾಂಬುಗಳನ್ನು ಎರಚುವದಿಲ್ಲ. ಬೆಂಗಳೂರಿನಲ್ಲಿ ಸೈರ್ ಕೂಗುವುದು. ಮದರಾಸಿನಲ್ಲಿ ಸೈರ್ ಕೂಗುವುದಿಲ್ಲ. ಈ ವಿಮಾನಗಳಲ್ಲಿ ಕೆಂಪು ದೀಪವಿರುತ್ತೆ, ಯಾರೂ ಗಾಬರಿಯಾಗಕೂಡದೆಂದು ಪ್ರಕಟವಾಗಿದೆ.

ಭರತಪುರದ ದಿವಾನರಾದ ಮಿ| ಮೆಸನ್‌ರವರು ಜೈನಾಕ್ಕೆ ಇಂಡಿಯಾ ರಾಯಭಾರಿಯಾಗಿ ಹೋಗುವುದರಿಂದ ಭರತಪುರಕ್ಕೆ ಶ್ರೀ ರಾಮನಾಥರವರು ದಿವಾನರಾಗುವುದು. ಶ್ರೀ ರಾಮನಾಥರವರು ಇಲ್ಲಿಂದ ಹೊರಟನ್ನೇಲೆ ಮಿ| ಮೆನನ್‌ರು ಹೊರಡುವುದರಲ್ಲಿ ಸ್ವಲ್ಪ ತೊಂದರೆಯಾಗಿದ್ದು ಈಗ ಮಿ| ಮೆನನ್‌ರು ಹೊರಡುವುದು ಸ್ಥಿರಪಟ್ಟಿತು.

ಆಸ್ಟ್ರೇಲಿಯಾದ ಉತ್ತರ ಕರಾಳದಲ್ಲಿರುವ ಕೆಂವು ದ್ವೀಪಗಳಲ್ಲಿ ಒಪಾನೀಯ ಭಾರಿ ಸೇನೆಗಳನ್ನು ಸೇರಿಸುತ್ತಿರುವುದೆಂದು ಪತ್ರಿಕೆಗಳು ತಿಳಿಸಿರುವುದು ನಿಜವೆಂದು ಆಸ್ಟ್ರೇಲಿಯಾ ಪ್ರಧಾನಿಗಳಾದ ಕರ್ಟಿನ್ ರವರು ಆ ದೇಶದ ಪಾರ್ಲಿಮೆಂಟು ಸಭೆಯಲ್ಲಿ ತಿಳಿಸಿದರು. ಆ ಪರಿಸ್ಥಿತಿಯನ್ನು ಎದುರಿಸಲು ತಕ್ಕ ಬಂದೋಬಸ್ತನ್ನು ಮಾಡಿಕೊಳ್ಳುತ್ತಿರುವರು.

ಉತ್ತರ ಆಫ್ರಿಕಾದಲ್ಲಿ ಅಮೇರಿಕಾ ಸೈನ್ಯಕ್ಕೆ ಜನರಲ್ ಐಸಿನ್ ಹೂವರ್‌ರವರು ನೇವಿ ಸಲ್ಪಟ್ಟರುವರು. ಇವರ ಕೈಕೆಳಗೆ ಬ್ರಿಟಿಷ್ ಸೈನ್ಯವು ಕೆಲಸಮಾಡುವುದು.

ಈಗ ಸಯಾಂ ಸೈನಿಕರು ಜಪಾನೀಯರ ಬದಲು ಇಂಡಿಯಾ ಬರ್ಮಾ ಗಡಿಯಲ್ಲಿ ಯುದ್ಧಮಾಡುತ್ತಿರುವುದರಿಂದ ಜಪಾನೀಯರ ಸೈನಿಕರು ದಿನದಿನಕ್ಕೆ ಕಮ್ಮಿಯಾಗುತ್ತಿರುವರೆಂದು ಗೊತ್ತಾಗುವುದು.

ನರಸರಾವುಪೇಟೆಯಲ್ಲಿ ಕೆಲವರು ಕಳ್ಳರು ಪಾಂಡುರಂಗ ದೇವಾಲಯದೊಳಕ್ಕೆ ಹೊಕ್ಕು ಮೂಲವಿರಾಟ್ಟನ್ನು ಅಗೆದು ಗಳಕ್ಕೆ ಟೇಕಿಸಿ ಒಳಗಿದ್ದ ಒಂಗಾರದ ಯಂತ್ರವನ್ನು ತೆಗೆದುಕೊಂಡು ಫಲಾಯನರಾಗಿರುವರು. ಇದುವರೆಗೂ ಕಳ್ಳರ ಪತ್ತೆಯಾಗಿರುವುದಿಲ್ಲ ಆ ವಿಗ್ರಹವನ್ನು ಪುನಃ ಸ್ವಸ್ಥಾನದಲ್ಲಿ ಪ್ರತಿಷ್ಟೆಮಾಡಲು 1000 ರೂಪಾಯಿಗಳನ್ನು ವ್ಯಯ ಮಾಡಲು ಅಲ್ಲಿಯ ವೈಶ್ಯ ಮಹಾ ಜನಗಳು ನಿಶ್ಚಯಿಸಿರುವರು. ಆಗಲೇ ಜಪಾದಿಗಳು ನಡೆಯುತ್ತಿವೆ. ಅಸ್ತಿಕ ಬುದ್ಧಿಯುಳ್ಳ ಅಲ್ಲಿಯ ವೈಶ್ಯ ಮಹಾಮಂಡಲಿಯವರಿಗೆ ದೇವರು ಸುಖ ಸಂತೋಷಗಳನ್ನು ಪ್ರಸಾದಿಸಲಿ.

5 ನೇ ತಾರೀಖು ಮತ್ತು 6 ನೇ ತಾ|| ನಲ್ಲಿ ಹೊಸಪೇಟೆಯಲ್ಲಿಯಲ್ಲಿ ವೈಸರಾಯ್ ಕಾರ್ಯಕಾರಿ ಮಂಡಲ ಸಭೆ ನಡೆಯಿತು. ವೈಸರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು.

ಕರಾಚಿಯಲ್ಲಿ 9 ನೇ ತಾ. 2 ಫ್ಲೈರ್ ಎಂಜಿನ್‌ಗಳು ಡಿಕ್ಕಿ ಹೊಡೆದರ ಅದರಲ್ಲಿದ್ದ 15 ಮಂದಿ ಗಾಯಗೊಂಡಿರುವರು.

ಜಿಲೆಟ ಬ್ಲೇಡ್‌ಗಳ ತಯಾರಮಾಡುವ ಮುಖ್ಯಾಧಿಕಾರಿಯು ಈಗ ಇನ್‌ಸಾಲ್ವೆನ್ಸಿಗೆ ಅರ್ಜಿ ಹಾಕಿರುವನು.

New Opera Talkies

From 18-2-43

ಶೋಭ (ಹಿಂದಿ)

ಶೋಭನಸಮರ್ಥ ಮತ್ತು ಸಾಹುಮೋದಕ್ ಪಾತ್ರ ವಹಿಸುವರು.

ಗುಲಾಂ ಹುಸೇನ್ ಎಂಬ ಜ್ಯೋತಿಷ್ಯನು ಒಬ್ಬ ಸಿಪಾಯಿಗೆ ಇಂಡಿಯಾ ಬಿಟ್ಟು ಹೊರಗೆಹೋದರೆ ಸಾವು ಸಿದ್ದವೆಂದು ಹೇಳಿದ್ದ. ಈ ಜ್ಯೋತಿಷ್ಯನಿಗೆ ಇಂಡಿಯಾ ಡಿಫೆನ್ಸ್ ಪ್ರಕಾಶ ತಿಳಿಸುವರು.

ಟರ್ಕಿ

ಜರ್ಮನಿಯು ತುರ್ಕಿಗೆ ಮಿತಿಮೀರಿ ಆಶೆ ತೋರಿಸುತ್ತಿದೆ. ತುರ್ಕಿಯಾವದಕ್ಕೂ ಬಗ್ಗುವ ಹಾಗಿಲ್ಲ. ಪೂರ್ವದ ಆಟೋಮನ್ ಚಕ್ರಾಧಿಪತ್ಯವನ್ನಾಗಿ ಮಾಡುವೆವು ಎಂದು ಹೇಳಿದರು. ತುರ್ಕಿಯು ಕಿವಿ ಕೊಡುವುದಿಲ್ಲ ಇರಾನ್, ಇರಾಕ್, ಸಿರಿಯಾ ಡಡ್‌ಕ್ಯಾನಿಸ್ ದ್ವೀಪಗಳೂ, ರಸ್ತೆ ಮಾಡಲು ಸೇತುವೆ ಕಟ್ಟಲು ಇಂಜನಿಯರನ್ನು ಕೊಡುವೆವು ಎನ್ನುವರು. ಜರ್ಮನಿಗೆ ಒಂದೇ ಮಾರ್ಗ ಡಾರ್ಡನಲ್ಸ್‌ನಲ್ಲಿ ನುಗ್ಗಿ ಈಜಿಪ್ಟ್ ಆಕ್ರಮಿಸಬೇಕು. ತುರ್ಕಿಗೆ ಯುದ್ಧಬೇಡ. ಈಜಿಪ್ಟ ಕಡೆ ಮಿತ್ರರ ಸೈನ್ಯವಿಲ್ಲವೆಂದು ಡಾರ್ಡಿನಲ್ಲಿ ನುಗ್ಗಿದರೆ ಬಹುಬೇಗನೆ ಆ ಪ್ರಾಂತ್ಯಗಳನ್ನು ಚಾಯಲ್ಲಿ ಹಾಕಿಕೊಳ್ಳಬಹುದೆಂದು ಆಲೋಚಿಸುತ್ತಿರುವರು.

ಲಂಡನ್ ಟೈಮ್ಸ್

ಆಸ್ಟ್ರೇಲಿಯಾದಿಂದ ಇಂಡಿಯಾಕ್ಕೆ ಗೋಧಿ ಬರುತ್ತೆಂದು ಲಂಡನ್ ಟೈಮ್ಸ್ ಪತ್ರಿಕೆಗೆ ಬಹು ಕೋಪ. ಏನು ಪ್ರತಿ ಹಡಗು ಅಷ್ಟು ಸಾಮಾನುಗಳಿಗೆ ಬೇಕು. 1943 ರಲ್ಲಿ ನಮ್ಮ ಏರ್ಪಾಡೇನು? ಟೈಮ್ಸ್ ಪತ್ರಿಕೆ ತಿಳಿದಿರುವುದು ಇಂಡಿಯಾದಲ್ಲಿ ಆಹಾರವಸ್ತುಗಳನ್ನು ಶೇಖರ ಮಾಡಿರುತ್ತಾರೆ ಆಹಾರಪದಾರ್ಥಗಳಿಲ್ಲ ಎಂದು ತಿಳಿದುಕೊಂಡಿದೆ. ರೇಷನಿಂಗ್ ಕೂಡ ಇಂಡಿಯಾದಲ್ಲಿ ಅನುಕೂಲವಾಗುವುದಿಲ್ಲವೆಂದು ಹೇಳಿದೆ. ಆಹಾರ ಪದಾರ್ಥ ಶೇಖರ ಮಾಡಬಾರದು, ಆವುದು ಮಾಡಲು ಹಡಗನ್ನು ಕೊಡಬಾರದೆಂದು ಹೇಳಿದರೆ ಮುಂದೆ ಏನು ಮಾಡಬೇಕು. ಟೈಮ್ಸ ಪತ್ರಿಕೆ ಉತ್ತರ—ಜನರಾತಕ್ಕೆ ದಸ್ತಾನು ಮಾಡುವ ವಿಷಯದಲ್ಲಿ ಬಹಿರಂಗವಾಗಿ ಹೇಳಬಾರದೆಂದು ಜನರು ಬಹಿರಂಗವಾಗಿ ಹೇಳಿದಾಗಲೆಲ್ಲಾ ಏನು ಮಾಡಿತು? ಸಹಾಯ ಮಾಡಿತೆ! ಹಿಂದುಸ್ಥಾನದವರು ಮಾಡುವುದು ಸರಿ ಎಂದಿನೆ!

ದಂಡನೆ

ಆರು ಸಾವಿರ ರೂಪಾಯಿಗಳಷ್ಟು ಚಿಲ್ಲರೆ ನಾಣ್ಯ ಸಂಗ್ರಹಿಸಿದ ಲಕ್ನೋವಿನ ಒಬ್ಬ ಅಂಗಡಿಯವನಿಗೆ ಐದು ವರ್ಷಗಳ ಕಠಿಣ ಸಜಾ ವಿಧಿಸಲಾಗಿದೆ.

ಪೋಲರಿಗೆ ಜರ್ಮನರ ನಾಗರಿಕತನದ ಹಕ್ಕು

ಪೋಲಂಡಿನ ಜನರು ಮೂಲತಃ ಜರ್ಮನ್ ಕುಲದವರು ಐತಿಹಾಸಿಕ ಘಟನೆಗಳಿಂದ ಮಾತ್ರವೇ ಅವರು ಪೋಲಂಡಿನ ಪದ್ಧತಿಗಳನ್ನು ಅನುಸರಿಸಿ ಪೋಲೆಂಡಿನ ಭಾಷೆಯನ್ನಾಡತೊಡಗಿರುವರು. ಆದರೆ ಅವರು ಜರ್ಮನ್ ವಾಲ್ಕ್ಯಸ್‌ಲಸ್ಟೈಯವರಾಗಿ, ಇದೇ ಮಾರ್ಚ್ ತಾ. ೧೫ ರೊಳಗೆ ಸೇರಿದ ಪಕ್ಷದಲ್ಲಿ ಅವರಿಗೆ ಜರ್ಮನರ ನಾಗರಿಕತನದ ಹಕ್ಕು ಬಾಧ್ಯತೆಗಳನ್ನು ಕೊಡಲಾಗುವುದಲ್ಲದೆ, ಹಿಟ್ಲರನು ಆ ಇಡೀ ಜನಾಂಗವನ್ನೇ ತನ್ನ ರಕ್ಷಣೆಯೊಳಗೆ ಇರಿಸಿಕೊಳ್ಳುವನೆಂದೂ ವಾರ್ಸಾ ನಗರದಲ್ಲಿ ಸಾರಲಾಗಿದೆ.

ಚರಿತಾರ್ಹವಾದ ಸ್ಟಾಲಿಗ್ರಾಡ್

ಸ್ಟಾಲಿಗ್ರಾಡಿನಲ್ಲಿರುವ ಬ್ರಿಟಿಷ್ ಪತ್ರಿಕಾ ಬಾತ್ಮಿದಾರರು ಹಾಳು ಬಿದ್ದಿರುವ ಪಟ್ಟಣದ ವಿವರಣೆಯನ್ನು ಕಳುಹಿಸಿರುತ್ತಾರೆ. ಅಲ್ಲಿ 40 ಲಕ್ಷ ಕ್ಕೆಮೇಲ್ಪಟ್ಟ ಜನಸಂಖ್ಯೆಯಿದ್ದಿತು. ಅಲ್ಲಿದ್ದ ಪ್ರತಿ 20 ಮನೆಗಳಲ್ಲಿ 19 ನಾಶ ಮಾಡಲ್ಪಟ್ಟಿವೆ. 5 ತಿಂಗಳಿಂದ ಮುತ್ತಲ್ಪಟ್ಟಿದ್ದ ಊರು ಈಗ ಬಿಡುಗಡೆಯಾದ್ದರಿಂದ ರಷ್ಯನರು ಬಂದು ನೆಲೆಸುತ್ತಿರುತ್ತಾರೆ. ಪಟ್ಟಣದ ಪುನರ್ರಚನೆ ಕಾರ್ಯವು ಪ್ರಾರಂಭವಾಗಿದೆ. ಹಿಂದಿದ್ದಂತೆ ಪಟ್ಟಣವನ್ನು ಸೊಗಸಾಗಿ ಮಾಡಲು ಹೊರಟಿದ್ದಾರೆ. ರಷ್ಯಾ ಟೋಪಿಯನ್ನು ಧರಿಸಿ ಇಬ್ಬರು ಜರ್ಮನ್ ಖೈದಿಗಳು ಹೂ ತೋಟಗಳನ್ನು ನಿರ್ಮಿಸುತ್ತಿದ್ದಾರೆ.

ಜಾತಿ ದ್ವೇಷ ತಪ್ಪಿಲ್ಲ!

ಅಮೇರಿಕಾದಲ್ಲಿ ನಿಗ್ರೋ ಜನರು ಶೇಕಡ ಹತ್ತರಷ್ಟು ಇದ್ದರೂ ಅವರಿಗೆ ಸೌಖ್ಯವಿಲ್ಲ. ಇವರು ಸಿನಿಮಾದಲ್ಲಿ ನಟಿಸಿದರೆ ತಾನು ಪಾರ್ಟ್ ಮಾಡುವುದಿಲ್ಲವೆಂದು ಪಾಲ್ ರಾಬಿನ್‌ಸನ್ ಹೇಳಿದ. ರಷ್ಯಾದಲ್ಲಿ ಬಣ್ಣವಾಗಲಿ, ಜಾತಿಕುಲವಾಗಲಿ ನೋಡುವುದಿಲ್ಲ ಎಲ್ಲರೂ ಒಂದೇ. ಎಲ್ಲಾ ಮಕ್ಕಳನ್ನು ಪಾಠಶಾಲೆಗೆ ಸೇರಿಸುವರು.

ಪಿಸಿಫಿಕಿನ ರಣರಂಗ

ನ್ಯೂಗಿನಿಯ ಬಳಿ ಜಪಾನಿನ ೨೧ ವಿಮಾನಗಳು ಧ್ವಂಸವಾದವು. ಜೇಗನೆ ಜಪಾನರಿಗೂ ಮಿತ್ರರಾಷ್ಟ್ರಗಳಿಗೂ ಒಂದು ಘೋರ ಕಾಳಗವುಂಟಾಗಬಹುದೆಂದು ತಿಳಿದು ಬರುತ್ತಿದೆ.

ಮನಸ್ಸಿನಂತೆ ಮಹದೇವ

ಪ್ರೀತಿಯಿಂದ ಪ್ರೀತಿಯು ಹೆಚ್ಚುತ್ತದೆ. ಕ್ರೋಧದಿಂದ ಕ್ರೋಧವು ಹೆಚ್ಚುತ್ತದೆ. ಇದು ಸ್ವಭಾವ ಸಿದ್ಧವಾದ ವಿಷಯ. ಪ್ರಪಂಚದಲ್ಲಿ ಇಂದಿನ ಮಹಾಯುದ್ಧಕ್ಕೆ ಕಾರಣವು, ಕ್ರೋಧಾದಿಗಳು ಮಾತ್ರವೆ. ಪ್ರೀತಿ, ತೃಪ್ತಿ, ಶಾಂತಿ ಇದ್ದಲ್ಲಿ ಎಂದೂ ಎಲ್ಲಿಯೂ ಯಾವ ಒಗೆಯೂ ಅಶಾಂತಿಯೂ ಜನಿಸದು. ಯುದ್ಧದ ವಾಸನೆಯೇ ಎಲ್ಲಿಯೂ ಇರುವುದಿಲ್ಲ. ಅತ್ಯಾಶೆ, ರಾಜ್ಯಾಕಾಂಕ್ಷೆ, ಧನಾಕಾಂಕ್ಷೆ, ಸ್ವಾರ್ಥಪರತೆ, ಮಾತ್ಸರ್ಯ, ಈರ್ಷೆ ಅಸೂಯೆ, ಅಹಂಕಾರ ಇವುಗಳೇ ಚಕ್ರವರ್ತಿಗಳನ್ನೂ ಕೂಡ ಪಾತಾಳಕ್ಕೆ ತಳ್ಳುವಂಥವು. ದೈವಿಕ ಪಥದಲ್ಲಿ ಹುಡುಗರನ್ನು ಬೆಳೆಸುವ ಅವಕಾಶವು ಈಗಿನ ವಿದ್ಯಾಭ್ಯಾಸದ ರೀತಿಯಲ್ಲಿರುವುದಿಲ್ಲ. ಇಂದಿನ ಮಹಾಯುದ್ಧಕ್ಕೆ ದೈವೀ ಸಂಪತ್ತಿಯಿಂದ ರಹಿತವಾದ ವಿದ್ಯಾಭ್ಯಾಸದ ಕ್ರಮವು ಕೂಡ ಕೂಡ ಎಂದು ಹೇಳಬಹುದಾಗಿದೆ

ಬೆರಿಂಗ್ ಜಲಸಂಧಿ

ಬಾಕ್ಸರಿಂಗ (ಬೆಹರಿಂಗ್) ಜಲಸಂಧಿಯು ಈಗಿನ ಸಮಯಕ್ಕೆ ಪ್ರಾಮುಖ್ಯತೆಯನ್ನೆಳೆದುತ್ತಿದೆ. ರಷ್ಯನರು ಶೀತ ಕಾಲದಲ್ಲಿಯೂ ಮಂಜುಗಡ್ಡೆಗಳನ್ನು ಒಡೆದು ಹಡಗುಗಳನ್ನು ಉತ್ತರ ಧ್ರುವ ಸಾಗರದಲ್ಲಿ (ಆರ್ಕಟಿಕ್) ನಡೆಸಲು ಶಕ್ಯರಾಗಿರುವದರಿಂದಲೂ ಆ ಮಾರ್ಗವು ಉತ್ತರ ಪಶ್ಚಿಮಾರ್ಧ ಗೋಳಕ್ಕೆ ಸಮೀಪವಾಗಿರುವುದರಿಂದಲೂ ಈ ಮಹಾಯುದ್ಧವು ಸ್ಥಿತಿಸಂತರವೂ ಕೂಡ ಈ ಮಾರ್ಗವು ವ್ಯಾಪಾರ ಸಾಮಾನುಗಳಿಗೂ ಉಪಯೋಗವಾಗುವದು. ಅಂತೂ ರಷ್ಯನರು ಸಾಹಸಿಗಳು, ಧೈರ್ಯವಂತರು. ಉತ್ಸಾಹಪರರು, ಮಾತೃದೇಶದ ಮೇಲೆ ಪೂರ್ಣ ವಿಶ್ವಾಸವುಳ್ಳವರು, ತಮ್ಮ ದೇಶೀಯರೆಲ್ಲಾ ಸುಖ ಸಂತೋಷಗಳಿಂದ ಜೀವಿಸಬೇಕೆಂದು ಬಯಸುವರು. ಇಂಥವರಿಗೆ ಈಚೆಗೆ ವಿಜಯ ಪರಂಪರೆಗಳು ದೊರೆಯುತ್ತಿರುವುದು ಒಂದು ಹೆಚ್ಚಿನ ಮಾತಲ್ಲ.

ಭಾರತೀಯರ ನಕ್ತ

ಭಾರತೀಯರು, ರಾಯಲ್ ಇಂಡಿಯನ್ ಸೇವೆಯಲ್ಲಿ ಕೆಲಸಮಾಡಲು ಶಕ್ತರೆಂದೂ. ಅದಕ್ಕೆ ಅವಶ್ಯಕವಾದ ಧೈರ್ಯಸ್ಥೈರ್ಯಾದಿಗಳು ಇವರಲ್ಲಿರುವದೆಂದೂ ವೈಸ್ ಅಡ್ಮಿರಲ್ ಸರ್ ಹರ್ಬರ್ಟ್‌ರವರು ಮುಂಬೈನಗರದ ಪ್ರೆಸ್ ಕಾನ್‌ಫರೆನ್ಸಿನಲ್ಲಿ ತಿಳಿಸಿರುವರು.

ಅಪೇರಿಯಾದ್

ಮಂಗಳೂರು ಗಣಪತಿ ಸುವರ್ಣಾ ಗಜಾನನ ಬಿಸ್ಕಿಗಳನ್ನೆಉಪಯೋಗಿಸಿ

ಪಿ. ಮಂಜಪ್ಪ, ಬೀಡಿ ಮರ್ಚೆಂಟ್

ಹಳೇ ಅಗ್ರಹಾರ, ಮೈಸೂರು.

For good printing
Saraswati Printing Press
Lansdowne Buildings, Mysore

Lakshminarasimha Press
Srirampet, Mysore

ನಿಮ್ಮ ಊರಿನ ಮೆಚ್ಚಿನ ಚಲನ ಚಿತ್ರ ಮಂದಿರಗಳಲ್ಲಿ ಎದುರುನೋಡಿ

— ಹೆಚ್ ಆರ್ ಜಿ. ಸಿ. ಯವರ —

ಶ್ರೀ ಪಿಕ್ಚರ್ಸ್

ಗಾಂಧಿಸ್ಕ್ವೇರ್, ಮೈಸೂರು ಇವರ ಸಂಗೀತರತ್ನ ಆಸ್ಥಾನ ವಿದ್ವಾನ್ ಟಿ. ಚಾಂಡಯ್ಯನವರು, ಕಲ್ಚರ್ಡ್ ಕಮೆಡಿಯ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ or (VIOLINIST)

ಶ್ರೀದೇವಿ ಆರ್ಟ್ಸ್

ಅಂದವಾದ ಬೋರ್ಡುಗಳು ಬರೆಯಲ್ಪಡುತ್ತವೆ, ಎಲ್ಲಾ ತರಹದ ಚಿತ್ರಕೆಲಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು.
348 ಚಾಮರಾಜರೋಡ್, ಮೈಸೂರು

For Invigorating Coffee & Tea
Sastry's Coffee Rooms
Chamarajapuram, Myaore

HOTEL PARADISE
D. Subbiah Road, Mysore
paovides you with comfortable and homely meals

ಅಕ್ಕರ ಸಾಮಾಜಿಕ

ಭಾವಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ಸತ್ಯವಾದಿ ಆಫೀಸ್ ಮೈಸೂರು

ನಮ್ಮ ಮೈಸೂರು ಏಜೆಂಟರು
ಎಸ್.ಎಸ್. ಹರಿಯಪ್ಪನವರು.

" ಸತ್ಯವಾದಿ " ಚಂದಾದಾರರಾಗಿರಿ.

Edited, Printed & pnblished by M. S. Krishna Rao, at the Satyavadi Press. Chamaraja Agrahar, Mysore.